ಸಿ.ಸಿ ನಂಃ 10213/2016<br>ಚಾಸಾಃ 8, ಪ್ರಾಸಾಃ 5

## ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

## ಸಿ.ಸಿ ನಂಃ 10213/2016

| | |
|---|---|
| ಸಾಕ್ಷಿದಾರರ ಹೆಸರುಃ | ರವಿಕುಮಾರ್ ಹೆಚ್. ಎ |
| ತಂದೆಯ ಹೆಸರುಃ | ಲೇಟ್ ಆಂಜನಪ್ಪ |
| ವಯಸ್ಸುಃ | 65 ವರ್ಷ |
| ಉದ್ಯೋಗಃ | ನಿವೃತ್ತ ಪಿ.ಎಸ್.ಐ |
| ವಾಸಃ | ಹೊಸ ರಸ್ತೆ, ಪರಪ್ಪನ ಅಗ್ರಹಾರ, ಬೆಂಗಳೂರು |

**ದಿನಾಂಕಃ 06-01-2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಹಿರಿಯ ಸ.ಸ.ಅ ಅವರಿಂದಃ-**

1. 2011 ರಿಂದ 2019 ರವರೆಗೆ ಮೈಕೊ ಲೇಔಟ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿನಾಂಕಃ04-12-2014 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಮುಖ್ಯಪೇದೆ (ಸಂಖ್ಯೆಃ 4522) ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಸಂಜೆ 4.30 ಸಮಯಕ್ಕೆ ಸ್ಥಳ ಪಂಚನಾಮೆಗಾಗಿ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಘಟನಾ ಸ್ಥಳದಲ್ಲಿ ಇದ್ದ ಚಾಸಾ-4 ಮತ್ತು 5 ರವರನ್ನು ಪಂಚರನ್ನಾಗಿ ಕರೆದು ಸ್ಥಳ ಪಂಚನಾಮೆ ತಯಾರಿಸಿರುತ್ತೇನೆ. ಪಂಚನಾಮೆಯನ್ನು ಸಂಜೆ 5.00 ಗಂಟೆಯಿಂದ 6.00 ಗಂಟೆಯವರೆಗೆ ಜರುಗಿಸಿರುತ್ತೇನೆ.

3. ದಿನಾಂಕಃ 05-12-2014 ರಂದು ದೂರುದಾರ ಚಾಸಾ-1 ರವರ ಮರುಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-2 ರಿಂದ 5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ-1 ರವರಿಂದ ನಿವೇಶನ ಸಂಖ್ಯೆ 117 ಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ.

4. ದಿನಾಂಕಃ 27-01-2016 ರಂದು ಚಾಸಾ-6 ರವರಿಗೆ ಈ ಪ್ರಕರಣದ ಆರೋಪಿತರನ್ನು ಪತ್ತೆ ಹಚ್ಚಿ ಹಾಜರುಪಡಿಸುವಂತೆ ನಿರ್ದೇಶಿಸಿರುತ್ತೇನೆ. ಅದರಂತೆ ಅವರು 1 ರಿಂದ 3 ನೇ ಆರೋಪಿತರನ್ನು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ಅದರ ಬಗ್ಗೆ ಚಾಸಾ-6 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಆರೋಪಿತರನ್ನು ವಿಚಾರಣೆ ಮಾಡಿ ನಂತರ ಠಾಣಾ ಜಾಮೀನಿನ ಮೇಲೆ ಬಿಟ್ಟಿರುತ್ತೇನೆ.

5. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ದೋಷರೋಪಣಾ ಪಟ್ಟಿಯನ್ನು ದಿನಾಂಕಃ 05-03-2016 ರಂದು ಸಲ್ಲಿಸಿರುತ್ತೇನೆ. ಅದರಲ್ಲಿ 4 ರಿಂದ 6 ನೇ ಆರೋಪಿತರು ತಲೆಮರೆಸಿಕೊಂಡಿದ್ದಾರೆ ಎಂದು ನಮೂದಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ರಿಂದ 3 ನೇ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ.

6. ಸಾಕ್ಷಿಯು ನಿಪಿ-1 ಪಂಚನಾಮೆ ಮೇಲಿರುವ ಸಹಿ ನೋಡಿ ಗುರುತಿಸಿದ್ದಾರೆ. ಆದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ-**

7. ಈ ಪ್ರಕರಣದ ಮುಂದಿನ ತನಿಖೆಯನ್ನು ನಮ್ಮ ಠಾಣಾ ಪಿ.ಐ ರವರ ಆದೇಶದಂತೆ ಪಡೆದುಕೊಂಡಿರುತ್ತೇನೆ. ಸದರಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಕಡತವನ್ನು ಪಡೆದಾಗ ದೂರನ್ನು ಪರಿಶೀಲಿಸಿದ್ದೇನೆ. ಯಾವುದೇ ಆದಾರವಿಲ್ಲದ ಸೃಷ್ಟಿ ಮಾಡಲಾದ ದೂರು ಎಂಬುದು ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಸೃಷ್ಟಿ ಮಾಡಿದ ದೂರೆಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ಪಂಚರಿಗೆ ಲಿಖಿತವಾಗಿ ನೋಟಿಸ್ ಕೊಟ್ಟು ಕರೆಸಿಲ್ಲ. ಪಂಚರ ಹೆಸರು ಮತ್ತು ವಿಳಾಸವನ್ನು ಪಂಚನಾಮೆಯಲ್ಲಿ ಬರೆಯಲು ಏನು ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ-1 ನ್ನು ಪೊಲೀಸ್ ಠಾಣೆಯಲ್ಲಿ ಸೃಷ್ಟಿ ಮಾಡಿ ಕೊನೆಯಲ್ಲಿ ಪಂಚರ ಹೆಸರು ಬರೆದು ಸಹಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

9. ನಾನು ಮತ್ತು ಚಾಸಾ-1 ರವರು ಆತ್ಮೀಯರಾಗಿದ್ದರಿಂದ ನಿಪಿ-1 ಅನ್ನು ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಹಿಂದಿನ ತನಿಖಾಧಿಕಾರಿ ಏನೇನು ಮಾಡಿದ್ದರ ಬಗ್ಗೆ ನಾನು ಕಡತದಲ್ಲಿ ನಮೂದಿಸಿಲ್ಲ. ಠಾಣೆಯಲ್ಲಿ ಇರುವ ನಾನು ಕಡತ ಪಡೆದುಕೊಂಡ ಬಗ್ಗೆ ನಮೂದಾಗಿರುವ ದಾಖಲೆಯನ್ನು ಅಂತಿಮ ವರದಿಯ ಜೊತೆಯಲ್ಲಿ ಸಲ್ಲಿಸಿಲ್ಲ.

10. ಆರೋಪಿತರು ಸಾರ್ವಭೌಮ ನಗರ, ಬಿಳೇಕಳ್ಳಿ ಯಲ್ಲಿ ಸಾಮಾಜಿಕ ಚಟುವಟಿಕೆ ಮಾಡಿ ಸದರಿ ಪ್ರದೇಶದಲ್ಲಿ ಪರಿಚಿತ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸರಿ. ಆರೋಪಿತರ ಸ್ವಯಾರ್ಜಿತ ಮತ್ತು ಪಿತ್ರಾರ್ಜಿತ ಆಸ್ತಿಗಳು ಸದರಿ ಪ್ರದೇಶದಲ್ಲಿ ಇವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

11. ನನ್ನ ತನಿಖಾವಧಿಯಲ್ಲಿ ದೂರಿನಲ್ಲಿ ನಮೂದಿಸಲಾದ ಸೈಟ್ ಸಂಖ್ಯೆಃ 117 ರ ದಾಖಲೆಗಳನ್ನು ಪಡೆದು ಪರಿಶೀಲಿಸಿರುತ್ತೇನೆ. ಆರೋಪಿತರನ್ನು ಕರೆಸಿ ಅವರಿಂದ ದಾಖಲೆಗಳನ್ನು ಪಡೆದು ನಾನು ಪರಿಶೀಲಿಸಿಲ್ಲ. ಆರೋಪಿತರು ನೇರವಾಗಿ ನ್ಯಾಯಾಲಯದಲ್ಲಿ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿರುತ್ತಾರೆ ವಿನಃ ಆರೋಪಿತರನ್ನು ನಾನು ದಸ್ತಗಿರಿ ಮಾಡಿಲ್ಲ ಹಾಗೂ ಜಾಮೀನಿನ ಮೇಲೆ ಬಿಟ್ಟಿಲ್ಲ ಎಂದರೆ ಸರಿಯಲ್ಲ.

12. ಆರೋಪಿತರಿಗೂ 117 ನೇ ಸೈಟಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿತರ 11.12 ಗುಂಟೆ ಜಾಗವು ಸರ್ವೆ ನಂಬರ್ಃ138/8, ಖಾತಾ ನಂಃ136/92 ರಲ್ಲಿ ಇದ್ದು ಅದಕ್ಕೂ ಸೈಟ್ ನಂಬರ್ಃ 117 ಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

13. ಸರ್ವೆ ನಂಬರ್ಃ138/8 ನ್ನು ಮನೋಹರ್ ಎಂಬುವವರಿಂದ 1 ನೇ ಆರೊಪಿ ರಜನಿ ರವರು 2014 ರಲ್ಲಿ ಖರೀದಿಸಿದ್ದಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ

ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ್ಃ138/8 ರಲ್ಲಿರುವ ಶೆಡ್ಡ್ ಗಳಿಗೆ ಸಂಬಂಧಿಸಿದಂತೆ ಎಲೆಕ್ಟ್ರಿಸಿಟಿ ಹಾಗೂ ನೀರಿನ ಬಿಲ್ಲುಗಳು ಈಗಲೂ ಸಹ 1 ನೇ ಆರೋಪಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ನೇ ಆರೋಪಿಯ ಹೆಸರಿಗೆ ಪೊಡಿ ಆಗಿ, ಖಾತೆಯಾಗಿ ಕನ್ವರ್ಷನ್ ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

14. ಚಾಸಾ–1 ರಿಂದ ಚಾಸಾ–5 ರವರ ಹೇಳಿಕೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಗಳಲ್ಲಿ ನಮೂದಿಸಿದಂತೆ ಆಸ್ತಿ ಸಂಖ್ಯೆ: 117 ಕ್ಕೆ ಯಾವುದೇ ಕಾಂಪೌಂಡ್ ಇಲ್ಲ ಮತ್ತು ಕಾಂಪೌಂಡ್ ಒಡೆಯುವ ಕೆಲಸ ಆರೋಪಿತರು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಜೀವ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅತೀಕ್ರಮಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ–1 ರವರು ಎಲ್ಲವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

15. ಆರೋಪಿತರನ್ನು ಪತ್ತೆ ಹಚ್ಚಲು ಚಾಸಾ–6 ರವರನ್ನು ನೇಮಕ ಮಾಡಿದ್ದೇನೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಪತ್ತೆ ಹಚ್ಚಿದ ಬಗ್ಗೆ ಚಾಸಾ–6 ರವರ ವರದಿ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ 4 ರಿಂದ 6 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಅವರು

ತಲೆಮರಿಸಿಕೊಂಡವರೆಂದು ಅಂತಿಮ ವರದಿಯಲ್ಲಿ ತೋರಿಸಿದ್ದೇನೆ ಎಂದರೆ ಸರಿಯಲ್ಲ.

16. ಚಾಸಾ-1 ಮತ್ತು ನಾನು ಸ್ನೇಹಿತರಾಗಿರುವುದರಿಂದ ಚಾಸಾ-1 ರಿಂದ 3 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಅವರ ನಿವೇಶನ ಎಲ್ಲಿದೆ ಎಂದು ತಿಳಿಯದೇ ಇದ್ದರೂ ಸಹ ಆರೋಪಿತರ ವಿರುದ್ಧ ದಾಖಲೆ ಸೃಷ್ಟಿಸಿ, ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ರಂಗೇಗೌಡ ಸಿ)
ಮು. ಮ. ದಂ. ನ್ಯಾ. ಬೆಂ. ನಗರ.